9 A.M.

ಶ್ರೀ ಕೆ. ಎಲ್. ನರಸಿಂಹಯ್ಯ—ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಳ್ಳಿಗಳನ್ನು ಸುಫರ್ದಿಗೆ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ರಾಚಯ್ಯ.—ಆ ವಿಚಾರದಲ್ಲಿ ಇನ್ನೂ ವರ್ತಮಾನ ಬಂದಿಲ್ಲ. ಅದು ಬಂದ ತಕ್ಷಣ ಒದಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ.—ಬಡಾವಣೆ ಮಾಡುವುದಕ್ಕೋಸ್ಕರ ಎಷ್ಟು ಟೈಂ ಲಿಮಿಟ್ ಹಾಕಿದ್ದೀರಿ? ಒಂದು ವರ್ಷವೇ, ಐದು ವರ್ಷವೇ, ಹತ್ತು ವರ್ಷವೇ ?

ಶ್ರೀ ಎಚ್. ರಾಚಯ್ಯ.—ಟೈಂ ನಿಗದಿ ಮಾಡುವುದಿಲ್ಲ. ಸಾಧ್ಯವಾದಷ್ಟು ಜಾಗ್ರತೆ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬೆಂಕಿಯಿಂದ ಸುಟ್ಟು ನಷ್ಟ ಹೊಂದಿದವರ ಕೇಸುಗಳನ್ನು ಸೆಟಲ್ ಮಾಡುವುದಕ್ಕೂ ಮೂರುನಾಲ್ಕು ವರ್ಷ ತೆಗೆದುಕೊಳ್ಳುತ್ತೀರ ?

ಶ್ರೀ ಎಚ್. ರಾಚಯ್ಯ.—ಬಹಳ ಜಾಗ್ರತೆಯಾಗಿ ಮಂಜೂರಾತಿ ಮಾಡಬೇಕೆನ್ನುವುದೇ ಸರ್ಕಾರದ ಉದ್ದೇಶ. ಲ್ಯಾಂಡ್ ಅಕ್ವಿಸಿಷನ್ ಆಕ್ಟ್ 17ನೆಯ ಸೆಕ್ಷನ್ ಪ್ರಕಾರ ಎಲ್ಲಾ ಕೇಸುಗಳನ್ನೂ ತೆಗೆದುಕೊಳ್ಳಬಾರದೆಂದು ಹೈಕೋರ್ಟ್ ಅಭಿಪ್ರಾಯವಿರುವ ಕಾರಣ, ಸ್ವಲ್ಪ ತಡವಾಗುತ್ತಿದೆ. ಈ ಸೆಕ್ಷನ್ ಪ್ರಕಾರ ಸರ್ಕಾರದವರು ಎಲ್ಲಾ ಸಂದರ್ಭಗಳಲ್ಲಿಯೂ ಅಧಿಕಾರವನ್ನು ಚಲಾಯಿಸಿದರೆ, ಕೇವಲ ಒಂದು ವರ್ಷದಲ್ಲಿ ಸೆಟಲ್‌ಮಾಡುವುದಕ್ಕೆ ಅವಕಾಶವಿದೆ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಬಿ. ಎಸ್. ಶಂಕರಪ್ಪ.—ಈಗ ಮಾಡುತ್ತಿರುವಂತೆ ಗ್ರಾಮಬಡಾವಣೆ ಕಾರ್ಯ ಮಾಡಿದರೆ ಇನ್ನು 15 ವರ್ಷಾದರೂ ಆಗುವುದಿಲ್ಲವೆನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ? ಅಂದಮೇಲೆ ಆದಷ್ಟು ಜಾಗ್ರತೆ ಅಕ್ಕೈತ್ಕರ್‌ಮಾಡಿಕೊಳ್ಳುವ ಕಾರ್ಯಕ್ರಮ ತೆಗೆದುಕೊಳ್ಳುತ್ತೀರ ?

ಶ್ರೀ ಎಚ್. ರಾಚಯ್ಯ.—15-20 ವರ್ಷ ಆಗಿಲ್ಲ. ಬಹಳ ಜಾಗ್ರತೆಯಾಗಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಅಂಥ ಕೇಸುಗಳನ್ನು ಸರ್ಕಾರದ ಗಮನಕ್ಕೆ ತಂದಪಕ್ಷದಲ್ಲಿ, ಕೇವಲ ಒಂದೆರಡು ವರ್ಷಗಳಲ್ಲಿ ಸೆಟಲ್‌ಮಾಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಜಮೀನು ಹಂಚಿಕೆಯ ಕಾರ್ಯವನ್ನು ಯಾವ ಅಧಿಕಾರಿ ಮಾಡುತ್ತಾರೆ ?

ಶ್ರೀ ಎಚ್. ರಾಚಯ್ಯ.—ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೂ, ಹರಿಜನೋದ್ಧಾರ ಅಧಿಕಾರಿಗಳಿಗೂ ಇದು ಸಂಬಂಧಪಟ್ಟುದು. ಅವರ ಮೂಲಕ ಹಂಚುತ್ತಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸರ್ಕಾರದ ಮುಂದೆ ತಡವಾಗಿರತಕ್ಕ 10-15 ಸಾವಿರ ಕೇಸುಗಳಿರಬಹುದಲ್ಲವೇ ?

ಶ್ರೀ ಎಚ್. ರಾಚಯ್ಯ.—ಕೆಲವು ಇವೆ. ಬಹಳ ಜಾಗ್ರತೆಯಾಗಿ ಮಂಜೂರುಮಾಡುತ್ತೇವೆ.

ಶ್ರೀ ಬಿ. ರಾಚಯ್ಯ—ಇನ್ನುಳಿದ 22 ಗ್ರಾಮಗಳಲ್ಲಿ ಎಷ್ಟು ಕಾಲದಲ್ಲಿ ಅಕ್ವಯರ್ ಮಾದುತ್ತೀರಿ ?

ಶ್ರೀ ಎಚ್. ರಾಚಯ್ಯ.—ಜಾಗ್ರತೆ ಎಲ್ಲ ಗ್ರಾಮಗಳಲ್ಲಿಯೂ ಅಕ್ವೈರ್ ಮಾಡುತ್ತೇವೆ.

Progress of Bhadra Channel Work.

*Q.—481. Sri KUNDUR RUDRAPPA (Channagiri).—

Will the Government be pleased to state :—

(*a*) the reasons for slow progress of B.R.P. (Bhadra River Project) Channel work and when it will be completed ;

(*b*) the details of survey work undertaken by Thyavanige and Malebennur Division Officers for the formation of Bhadra Channel road ?

A.—Sri H. M. CHANNABASAPPA (Minister for Public Works and Electricity).—

(*a*) The progress is good. The following factors have come in the way of better progress :

(i) Hard strata met with while excavating the channel.

(ii) Non-availability of sufficient number of labourers.

(iii) Paucity of contractors and piece-workers to take up masonry works of channels, road and building works.

(iv) Insufficient supply of steel.

(v) Non-availability of experienced staff.

As per the first five-year plan, the works are programmed to be completed by June 1961.

(*b*) Finalisation of alignment of Malebennur channel, and survey of distributaries.

The finalisation of the alignment of the Davangere Branch channel in the rear of Shantisagar tank bund, and details of alignment of branch channels and distributaries.

A detailed plan showing the alignment of Malebennur and Davangere Branch channels and roads is placed on the Table of the House: [Placed in the Legislature Library No. 11/L.A. 1959].

ಶ್ರೀ ಕುಂದೂರು ರುದ್ರಪ್ಪ.—ಎಸ್ಟಿಮೇಟು ಎಷ್ಟು ಲಕ್ಷಕ್ಕೆ ಕರೆದಿತ್ತು ? ಉಳಿದ ಹಣವೆಷ್ಟು ?

†ಶ್ರೀ ಎಚ್. ಎಂ. ಚೆನ್ನಬಸಪ್ಪ.—ಭದ್ರಾಯೋಜನೆ ಅಂದಾಜು 17 ಕೋಟಿ ಚಿಲ್ಲರೆ ರೂಪಾಯಿ ಇದ್ದುದು, ಪುನಃ ಅಂದಾಜು ಮಾಡಿದಾಗ 31 ಕೋಟಿ ಚಿಲ್ಲರೆ ರೂಪಾಯಿ ಆಗಿದೆ.

ಶ್ರೀ ಕುಂದೂರು ರುದ್ರಪ್ಪ.—ಕೆಲಸ ನಿಧಾನವಾಗಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾ ಕಾರಣಗಳಿವೆ ಎಂದು ಹೇಳಿದ್ದೇನೆ. ಮೊದಲು 17 ಕೋಟಿ ರೂಪಾಯಿಗೆ ಅಂದಾಜು ಮಾಡಿದ್ದು ರಫ್ ಎಸ್ಟಿಮೇಟು. ಡೀಟೇಲ್ಡ್ ಎಸ್ಟಿಮೇಟ್ ಮಾಡಿದ್ದು 1947ರಲ್ಲಿ. ಇದರ ಬಗ್ಗೆ ಅನೇಕ ವಿವರಗಳಿವೆ. ಮುಖ್ಯವಾಗಿ ಪ್ರಾಜೆಕ್ಟಿನ ಸ್ವರೂಪ ಬದಲಾವಣೆಯಾಗಿರತಕ್ಕಂಥದ್ದು, ಡಿಸೈನ್ ಬದಲಾವಣೆಯಾಗಿರತಕ್ಕಂಥದ್ದು, ರೇಟುಗಳು ಬದಲಾವಣೆಯಾಗಿರತಕ್ಕಂಥದ್ದು, ಇತ್ಯಾದಿ ಇತ್ಯಾದಿ ನಾನಾ ಕಾರಣಗಳಿವೆ.

ಶ್ರೀ ಕುಂದೂರು ರುದ್ರಪ್ಪ.—ನಿಮ್ಮ ರೇಟುಗಳು ಕಡಿಮೆ ಇದ್ದುದರಿಂದ ಕಂಟ್ರಾಕ್ಟರುಗಳ ಅಭಾವಕ್ಕೆ ಕಾರಣವಾಯಿತು ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾರಣ ಹೇಳುವಾಗ ರೇಟುಗಳು ಕಡಿಮೆ ಇದ್ದುದರಿಂದಲೇ ಎಸ್ಟಿಮೇಟು ಹೆಚ್ಚಾಗಬೇಕಾಯಿತು ಎಂದು ಈಗ ತಾನೆ ಹೇಳಿದ್ದೇನೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಭದ್ರಾ ಚಾನಲ್ ಕೆಲಸ ಎಷ್ಟು ಲಕ್ಷ ರೂಪಾಯಿಗಳದು ಆಗಿದೆ, ಇನ್ನೆಷ್ಟು ಆಗಬೇಕು, ಅದರ ಅಂದಾಜು ಎಷ್ಟು ಎನ್ನುವುದನ್ನು ಹೇಳುತ್ತೀರಿ ?

Sri H. M. CHANNABASAPPA.—I will be very happy to make a detailed statement about the right channel, left channel, branches, etc. It will be difficult to place all facts before the House during question hour.

ಶ್ರೀ ಎಂ. ರಾಮಪ್ಪ.—ಈಗ 31 ಕೋಟಿ ರೂಪಾಯಿಯ ಎಸ್ಟಿಮೇಟ್ ಇರುವುದರಿಂದ, ಕೇವಲ 11 ಕೋಟಿ ಖರ್ಚುಮಾಡಿರುವುದರಿಂದ, ಇನ್ನು ಹತ್ತು ವರ್ಷವಾದರೂ ಕೆಲಸವನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಂದೆಂದಿಗೂ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಎಸ್. ಶಂಕರಪ್ಪ.—ಭದ್ರಾ ಚಾನಲ್ ಕೆಲಸದಲ್ಲಿ ರಾಜಕೀಯ ಮುಖಂಡರ ಸಂಬಂಧಿಕರು ಕಂಟ್ರಾಕ್ಟ್ ಮಾಡಿರುವುದರಿಂದ ರೇಟ್ ಹೆಚ್ಚಿಗೆಯಾಗಬೇಕೆಂಬ ವ್ಯವಹಾರದಿಂದ ಕೆಲಸ ನಿಧಾನವಾಗಿರುತ್ತದೆಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕಿಂತಲೂ ಸತ್ಯಕ್ಕೆ ದೂರವಾದ ಮಾತು ಬೇರೆ ಇಲ್ಲ.

ಶ್ರೀ ಕುಂದೂರು ರುದ್ರಪ್ಪ.—ಸಾರ್ವ ಜನಿಕರ ಹಿತದೃಷ್ಟಿಯಿಂದ, ಗ್ರಾಮಗಳ ಅನುಕೂಲಕ್ಕೋಸ್ಕರವಾಗಿ ರೈಟ್ ಚಾನಲ್ ರಸ್ತೆ ಕೆಲಸವನ್ನು ಆದಷ್ಟು ಜಾಗ್ರತೆ ತಗೆದುಕೊಳ್ಳಬೇಕೆಂದು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ತಿಳಿಸಿದ್ದೇನೆ. ಪ್ರಾಜೆಕ್ಟ್ ನಾನಾ ರೂಪದಲ್ಲಿ ಪ್ರೊಗ್ರೆಸ್ ಆಗಬೇಕು. ಇರ್ರಿಗೇಷನ್ ಚಾನಲ್ ಆಗುವ ಹೊತ್ತಿಗೆ ರಸ್ತೆಗಳನ್ನೂ ತಯಾರುಮಾಡಬೇಕೆಂದು ಆಜ್ಞೆ ಕೊಟ್ಟಿದ್ದೇವೆ.

Sri F. X. DENIS PINTO.—What steps do Government propose to take to speed up the work on this project ? Work is very slow.

Sri H. M. CHANNABASAPPA.—It is not very slow. It is fairly satisfactory, but difficulties are there and in order to step up progress attempts are being made to remove the bottlenecks.

Dr. R. NAGAN GOWDA.—Hon'ble Minister has stated that the revised estimates amount to double the original estimate. Have Government taken into account the need for enhanced compensation for areas submerged under the scheme ?

Sri H. M. CHANNABASAPPA.—In the revised estimates provision has been made on the basis of the tendered rates and while making the revised estimates due regard has been paid to the enhanced prices of properties that were submerged.

Sri A. R. BADRI NARAYAN.—What steps do Government propose to take to speed up progress of the project ?

Sri H. M. CHANNABASAPPA.—One of the steps taken is to revise the estimate as per schedule of rates. We are also trying to secure steel from the Government of India. We have made arrangements to organise labour on a better footing.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ಕೆಲಸವು ಮಂದಗತಿಯಾಗಿ, ಮುಂದುವರಿದಿರುವುದಕ್ಕೆ ತಮಗೆ ಸ್ಟೀಲ್ ದೊರೆಯದಿರುವುದು ಒಂದು ಕಾರಣ ಎಂದು ನಮೂದುಮಾಡಿದ್ದೀರಿ. ಉಕ್ಕನ್ನು ಸಾಕಷ್ಟು ಪ್ರಮಾಣದಲ್ಲಿ ಕಾಲಕ್ಕೆ ಸರಿಯಾಗಿ ದೊರಕಿಸಿಕೊಳ್ಳುವುದಕ್ಕೆ ಏನು ವ್ಯವಹಾರ ನಡೆಸಿದ್ದೀರಿ? ಅದು ಇದೊಂದೇ ಪ್ರಾಜೆಕ್ಟಿಗೆ ಸಂಬಂಧಪಟ್ಟುದಲ್ಲ. ಎಲ್ಲಾ ವಿಷಯಗಳಿಗೂ ಸಂಬಂಧಪಟ್ಟುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಉಕ್ಕು ನಮಗೆ ಸಕಾಲದಲ್ಲಿ ದೊರೆಯದೆ ಇದ್ದಂಥ ಒಂದು ಕಾರಣವಿದೆ. ಈ ಕಾರಣದಿಂದ ಕೆಲಸ ನಿಂತು ಹೋಗಿಲ್ಲ. ಅದು ಈಗಿನ ಪ್ರಶ್ನೆಯಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವಹಾಗೆ 1947ನೆಯ ಇಸವಿಯಲ್ಲಿ ಇದು ಪ್ರಾರಂಭವಾದದ್ದು. ಆ ಕಾಲದಿಂದಲೂ ಕೂಡ ಕೆಲವು ಕಷ್ಟಗಳಿವೆ. ಇತ್ತೀಚೆಗೆ ಆ ಕಷ್ಟಗಳು ಅಷ್ಟಾಗಿಲ್ಲ. ಹೆಚ್ಚು ಪ್ರಮಾಣದಲ್ಲಿ ಉಕ್ಕನ್ನು ದೊರಕಿಸಿಕೊಳ್ಳಬೇಕೆಂಬ ಆಶೆ ನಮಗಿದೆ. ಅದಕ್ಕೆ ಅಡ್ಡಿ ಆತಂಕಗಳಿವೆ. ಆದರೂ ಸ್ಟೀಲನ್ನು ಪ್ರೊಕ್ಯೂರ್ ಮಾಡಲಿಕ್ಕೆ ತಕ್ಕ ಏರ್ಪಾಡು ಮಾಡಿದ್ದೇವೆ. ಮೊನ್ನೆತಾನೆ ನಮ್ಮ ಸ್ಪೀಚಿನ ಪರವಾಗಿ ಇಂಜಿನಿಯರು ಹೋಗಿ ಅವಶ್ಯಕವಾಗಿರುವಷ್ಟು ಸ್ಟೀಲು ದೊರೆಯುವುದಕ್ಕೆ ತಕ್ಕ ವ್ಯವಸ್ಥೆ ಮಾಡಿಕೊಂಡುಬಂದಿದ್ದಾರೆ. ಬಹುಶಃ ನಮ್ಮ ಮುಂದಿನ ಕೆಲಸಕಾರ್ಯಗಳಿಗೆ ಸ್ಟೀಲಿನ ತೊಂದರೆ ಒದಗದಂಥ ಸೂಚನೆಗಳಿವೆ.

Sri F. X. DENIS PINTO.—May I know what happened to the Nagar-Bomma tank scheme for which an estimate of Rs. 1,58,000 had been made ?

Sri H. M. CHANNABASAPPA.—The question is about Bhadra Channel, but the Hon'ble Member is asking a question about Nagar-Bomma tank.

ಶ್ರೀ ಎಂ. ರಾಮಪ್ಪ.—ಈ ಕೆಲಸವನ್ನು ಪೂರ್ತಿಯಾಗಿ ಮುಗಿಸಲು 20 ಕೋಟಿ ರೂಪಾಯಿಗಳು ಬೇಕು. ಇನು ಕೇವಲ ಎರಡು ವರ್ಷಗಳಲ್ಲೇ ಇಷ್ಟೊಂದು ಹೊಬಲಗನ್ನು ಖರ್ಚುಮಾಡಿ ಆ ಕೆಲಸ ಮುಗಿಸಲು ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

Sri H. M. CHANNABASAPPA.—We have spent somewhere about Rs. 14 crores and we are yet to spend about Rs. 18 crores and for that we have already built up the necessary organisation; the tempo is there and momentum has been gained. This year we propose to spend a little more than Rs. 5 crores for which we have programmed, next year about Rs. 6 crores and the balance the year after that. In this way we would like to finish the work in about 3 to 4 years.

ಶ್ರೀ ಕುಂದೂರು ರುದ್ರಪ್ಪ.—ಫಾನರ್ ಏರಿಯಾದಲ್ಲಿ ಜಮೀನು ಅಕ್ವೈರ್ ಮಾಡಿಕೊಂಡಿರುವ ರೈತರಿಗೆ ಪರಿಹಾರವನ್ನೊದಗಿಸಲು ಬೇಗ ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಅಕ್ವೈರ್ ಮಾಡಿಕೊಳ್ಳತಕ್ಕ ಜಮೀನುಗಳ ಬಗ್ಗೆ ಆಗಿಂದಾಗಲೇ ತಕ್ಷಣ ಶೇಕಡ 50ರಷ್ಟನ್ನು ಪಾವತಿಮಾಡಬೇಕೆಂದೂ ಉಳಿದ ಹೊಬಲಗನ್ನು ಅವಾರ್ಡ್ ಆದತಕ್ಷಣವೇ ಪಾವತಿಮಾಡಬೇಕೆಂದೂ ಆರ್ಡರ್ ಮಾಡಿದ್ದೇವೆ.

Agencies for releasing Government Advertisements.

*Q.–489. Sri V. SRINIVAS SHETTY (Coondapoor).—

Will the Government be pleased to state :—

(*a*) the amount spent annually on publicity of Government concerns ;

(*b*) whether it is a fact that Madras advertisers are entrusted with the work of releasing Government Advertisements ;

(*c*) what other works are entrusted to this Agency ;

(*d*) what is the commission allowed to this Agency for releasing the advertisements;

(*e*) what is the reason for change of agencies ?

*A.—Sri B. D. JATTI (Chief Minister).—

(*a*) The actual expenditure incurred on Commercial Publicity of Government concerns is :—

1957-58 ... Rs. 53,482·95 nP
1958-59 ... Rs. 1,59,200·00 nP.
(Expenditure booked so far)

(*b*) The Madras Advertising Company (Private) Ltd., Madras, has been entrusted with the work.

(*c*) In addition to advertisement in newspapers the following other forms of publicity was also entrusted to the Agency :—

1. Preparation of the film for Government Soap Factory.
2. Preparation of Hoardings.
3. Preparation of advertisement designs and block-making.
4. Preparation of Slides.
5. Printing of Posters, Placards, Calendars, etc.

(*d*) The agency will get a commission from the media not exceeding 15 per cent and no payment is made by Government.

(*e*) The work has been entrusted to a private company as an experimental measure to see if this will ensure more effective publicity.

Sri V. SRINIVAS SHETTY.—Have the Government called for any tenders in this connection ?

†Sri B. D. JATTI.—No.

Sri V. SRINIVAS SHETTY.—In what way is the Madras Advertising Company superior to the news papers and companies in this State ?

Sri B. D. JATTI.—It has got best experience and it is dealing with the all-India industrial concerns here and so we thought that it could do better work. Further, it was only as an experimental measure that we have given this work to them.

Sri V. SRINIVAS SHETTY.—Will advertisement be separated from the other items of work from preparation of film for Government Soap Factory to printing of posters, etc., and those items of work given to the companies in this State ?